ದಿನಾಂಕಃ 01.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ಸದರಿ ದಾವೆಯನ್ನು ನನ್ನ ಹೇಳಿಕೆಯಂತೆ ನನ್ನ ಹೆಂಡತಿ ಹೂಡಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಹಕ್ಕು ಪತ್ರದಲ್ಲಿ ಚೆಕ್ಕು ಬಂಧಿ ಇರುತ್ತದೆ ಎಂದರೆ ಸರಿ. ನಿಪಿ-3 2002-04 ರ ಸಾಲಿನದು ಎಂದರೆ ಸರಿ. ನಿಪಿ-3 ರಲ್ಲಿ ಕಾರ್ಯದರ್ಶಿಗಳ ಸಹಿಯ ನಂತರ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ನಿಪಿ-3 ರಲ್ಲಿ ವಿಸ್ತೀರ್ಣ ಹಾಗೂ ಚೆಕ್ಕು ಬಂಧಿ ನಮೂದಾಗಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ವಿಸ್ತೀರ್ಣ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-5 ರಿಂದ 7 ಪ್ರತಿವಾದಿಗಳು ನಮ್ಮ ಜಮೀನಿನಲ್ಲಿ ಗೋಡೆಯನ್ನು ಕಟ್ಟುತ್ತಿರುವ ಚಾಯಾಚಿತ್ರಗಳಾಗಿರುತ್ತವೆ. ಸದರಿ ಫೋಟೊಗಳು 1ನೇ ಪ್ರತಿವಾದಿ ತಮ್ಮ ಜಮೀನಿನಲ್ಲಿ ಕಟ್ಟುತ್ತಿರುವುದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗವು ಗ್ರಾಮಠಾಣಕ್ಕೆ ಸೇರುತ್ತದೆ ಎಂದು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಖಾನೇಶುಮಾರಿಯಲ್ಲಿ 203 ಮತ್ತು 204 ರಲ್ಲಿ 14 ಸೈಟ್‌ಗಳನ್ನು ಹಂಚಿದ್ದಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. OS.361/1997 ರ ದಾವೆಯನ್ನು 1 ನೇ ಪ್ರತಿವಾದಿಯವರ ಕುಟುಂಬದವರು ನನ್ನ ಹೆಂಡತಿಯ ವಿರುದ್ಧ ಹೂಡಿದ್ದರು ಹಾಗೂ ಅದರ ತೀರ್ಪಿನ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಖಾನೇಶುಮಾರಿ 203, 1ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಅವರಿಗೆ ವಿಲ್ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ಖಾತೆ ಮಾಡಿಸಿಕೊಂಡ ನಂತರ ಸದರಿ ಖಾತೆಯ ಅನಧಿಕೃತವಾಗಿದೆ ಎಂದು executive officer ಅದನ್ನು ರದ್ದು ಮಾಡಿದರು ಎಂದರೆ ಸರಿಯಲ್ಲ. ಅದಡಿ ಆದೇಶದ ಮೇರೆಗೆ ನನ್ನ ಹೆಂಡತಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP.No.26924-925/2003 ರನ್ನು ಹೂಡಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಹಿಂಪಡೆದೆವು ಎಂದರೆ ಸರಿಯಲ್ಲ. ನನಗೆ ಸಿದ್ದೇಶ್ವರ ಗೌಡ ಎಂಬುವವರ ಪರಿಚಯವಿರುತ್ತದೆ ಹಾಗೂ ಅವರ ಕಡೆಯಿಂದ 1 ನೇ ಪ್ರತಿವಾದಿಯು ಜಮೀನನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಸುಳ್ಳು ಖಾತೆಯನ್ನು ಮಾಡಿಸಿಕೊಂಡಿರುವ ಬಗ್ಗೆ ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. 1 ನೇ ಪ್ರತಿವಾದಿಯು ಖಾನೇಶುಮಾರಿ203 ಮತ್ತು 204 ರಲ್ಲಿ ಕಟ್ಟಡವನ್ನು ಕಟ್ಟಿ ಬಾಡಿಗೆಯನ್ನು

ನೀಡಿದ್ದಾರೆ ಎಂದರೆ ಸರಿ. ನಾನು ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.